PRAMC
EIC
SE-1
SE-2 1712
DS
EE
AEE-1
AEE-2
AEE-3

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** ಬೆಂಗಳೂರು ಸುತ್ತಮುತ್ತಲಿನ ರಸ್ತೆಗಳ ಅಭಿವೃದ್ಧಿ ಯೋಜನೆಯ ಪ್ಯಾಕೇಜ್-4ಬಿ ಅಡಿಯಲ್ಲಿ ಬೆಂಗಳೂರು ನಗರ ಜಿಲ್ಲೆಯ ವರ್ತೂರು ಗ್ರಾಮದಲ್ಲಿ 1.30 ಕಿಮೀ ಉದ್ದದ ಎಲಿವೇಟೆಡ್ ಕಾರಿಡಾರ್ 1.92 ಕಿಮೀ ಉದ್ದಕ್ಕೆ ವಿಸ್ತರಿಸುವ ಕಾಮಗಾರಿಯನ್ನು ಕೈಗೊಳ್ಳಲು ಪರಿಷ್ಕೃತ ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ.

**ಓದಲಾಗಿದೆ:-** ವ್ಯವಸ್ಥಾಪಕ ನಿರ್ದೇಶಕರು, ಕೆಆರ್‌ಡಿಸಿಎಲ್ ರವರ ಪತ್ರ ಸಂಖ್ಯೆ: ಕೆಆರ್‌ಡಿಸಿಎಲ್/ ಎಂಡಿ/ಪ್ಯಾಕೇಜ್-4ಬಿ/2019-20/3773, ದಿನಾಂಕ: 12-02-2020.

* * * *

**ಪ್ರಸ್ತಾವನೆ:-**

ಬೆಂಗಳೂರು ಸುತ್ತಮುತ್ತಲಿನ ಒಟ್ಟು 155 ಕಿಮೀ ಉದ್ದದ 04 ರಸ್ತೆ ಕಾಮಗಾರಿಗಳನ್ನು 10 ಪ್ಯಾಕೇಜ್‌ಗಳಲ್ಲಿ ರೂ. 2095.00 ಕೋಟಿಗಳ ಮೊತ್ತದಲ್ಲಿ ಕೆಆರ್‌ಡಿಸಿಎಲ್ ವತಿಯಿಂದ ನಿರ್ಮಾಣ ಮಾಡಲಾಗುತ್ತಿದೆ. 04 ರಸ್ತೆಗಳ ವಿವರಗಳು ಈ ಕೆಳಗಿನಂತಿದೆ:

AE-3
To upload to website

1) ಹೊಸಕೋಟೆ-ಬೂದಿಗೆರೆ- ಮೈಲನಹಳ್ಳಿ-ದೇವನಹಳ್ಳಿ ಅಂತರಾಷ್ಟ್ರೀಯ ವಿಮಾನ ನಿಲ್ದಾಣ ರಸ್ತೆ
2) ನೆಲಮಂಗಲ-ಮಧುರೆ-ಬ್ಯಾಥಾ ರಸ್ತೆ
3) ಹಾರೋಹಳ್ಳಿ-ಉರುಗನದೊಡ್ಡಿ-ಕೆಐಎಡಿಬಿ ಕೈಗಾರಿಕ ಪ್ರದೇಶ-ಜಿಗಣಿ-ಅನೇಕಲ್
4) ಅನೇಕಲ್-ಅತ್ತಿಬೆಲೆ-ಸರ್ಜಾಪುರ-ವರ್ತೂರು-ವೈಟ್‌ಫೀಲ್ಡ್- ಹೊಸಕೋಟೆ ರಸ್ತೆ

ಈ ಯೋಜನೆಗೆ ಅವಶ್ಯಕವಾಗಿರುವ ಒಟ್ಟಾರೆ ರೂ.2095.00 ಕೋಟಿಗಳ ಮೊತ್ತದಲ್ಲಿ ಶೇ. 50 ರಷ್ಟು ಸರ್ಕಾರದ ಅನುದಾನದಿಂದ ಹಾಗೂ ಶೇ. 50 ರಷ್ಟು ಕೆಆರ್‌ಡಿಸಿಎಲ್ ಸಂಸ್ಥೆಯು ಹಣಕಾಸು ಸಂಸ್ಥೆಗಳಿಂದ ಸಾಲ ಪಡೆದು ರಸ್ತೆಗಳನ್ನು ಅಭಿವೃದ್ಧಿ ಪಡಿಸಲು ಯೋಜಿಸಿದೆ. ಸದರಿ ಸಾಲವನ್ನು ಮರುಪಾವತಿಸಲು ಕೆಆರ್‌ಡಿಸಿಎಲ್ ಸಂಸ್ಥೆಯು ಟೋಲ್ ಸಂಗ್ರಹಣೆಯಿಂದ ಬರುವ ಸಂಪನ್ಮೂಲದಿಂದ ಶೇ. 50 ರಷ್ಟು ಸಾಲ ಹಾಗೂ ಬಡ್ಡಿಯನ್ನು ಇನ್ನುಳಿದ ಶೇ. 50 ರಷ್ಟು ಸಾಲ ಹಾಗೂ ಬಡ್ಡಿಯನ್ನು ರಾಜ್ಯ ಸರ್ಕಾರದಿಂದ ಮರುಪಾವತಿಸಲಾಗುವುದು.

1396
17/2/2022

ವರ್ತೂರು ಕೋಡಿಯ ದಕ್ಷಿಣದಲ್ಲಿ ಬಿಬಿಎಂಪಿ ವತಿಯಿಂದ ಎರಡು ಪಥದ ಎರಡು ಸೇತುವೆ ವತಿಯಿಂದ ನಿರ್ಮಾಣವಾಗುತ್ತಿದ್ದು ಕಾಮಗಾರಿಯು ಮುಕ್ತಾಯದ ಹಂತದಲ್ಲಿರುತ್ತದೆ. ಈ ಅಂಶವನ್ನು ಪರಿಗಣಿಸಿ, ಕೆಆರ್‌ಡಿಸಿಎಲ್ ವತಿಯಿಂದ ನಿರ್ಮಿಸಲು ಉದ್ದೇಶಿಸಿರುವ ಎಲಿವೇಟೆಡ್ ಕಾರಿಡಾರ್ ಅನ್ನು ವರ್ತೂರು ಕೋಡಿ ದಕ್ಷಿಣ ಸೇತುವೆಗಳ ನಂತರ ರ್‍ಯಾಂಪ್‌ನ್ನು ವರ್ತೂರು ಟ್ಯಾಂಕ್ ಬಂಡ್ ರಸ್ತೆಯ ಕಡೆಗೆ ವಿಸ್ತರಿಸಲು ಪ್ರಸ್ತಾಪಿಸಿದೆ. ಈ ಕಾರಣದಿಂದ ಪ್ರಸ್ತಾಪಿತ ಎಲಿವೇಟೆಡ್ ಕಾರಿಡಾರ್‌ನ ಉದ್ದದಲ್ಲಿ 0.62 ಕಿಮೀ ಹೆಚ್ಚಳವಾಗಿದೆ ಮತ್ತು ಕಾರಿಡಾರ್‌ನ ಪರಿಷ್ಕೃತ ಉದ್ದವು 1.92 ಕಿಮೀ ಆಗಿರುತ್ತದೆ (ಕಿಮೀ 28+700 ರಿಂದ ಕಿಮೀ 30+620 ವರೆಗೆ).

ವಸತಿ, ವಾಣಿಜ್ಯ, ಮಾಹಿತಿ ತಂತ್ರಜ್ಞಾನ ಮತ್ತು ಶೈಕ್ಷಣಿಕ ಕೇಂದ್ರಗಳನ್ನು ಒಳಗೊಂಡಿರುವ ಈ ಪ್ರದೇಶದಲ್ಲಿ ಅಗಾಧವಾದ ಅಭಿವೃದ್ಧಿಯನ್ನು ಪೂರೈಸಲು, ವಿಶಾಲವಾದ ರಸ್ತೆಯನ್ನು ಸ್ಥಳೀಯ ಸಂಚಾರಕ್ಕಾಗಿ 30m (100 ಅಡಿ) ಅಗಲದ ROW ಮತ್ತು 1.92 ಕಿಮೀ ಉದ್ದದ ಎಲಿವೇಟೆಡ್ ಕಾರಿಡಾರ್ ಅನ್ನು ನಿರ್ಮಿಸಿ ವಾಹನ ಸಂಚಾರವನ್ನು ಪ್ರತ್ಯೇಕಿಸಿ ಟ್ರಾಫಿಕ್ ಸಮಸ್ಯೆಯನ್ನು ಸಮಗ್ರವಾಗಿ ಪರಿಹರಿಸಲು ಉದ್ದೇಶಿತ ಕಾಮಗಾರಿಯು ಅಗತ್ಯವಿರುತ್ತದೆ.

ಸದರಿ ರಸ್ತೆಯ ಭಾಗದಲ್ಲಿ ಸಂಚಾರ ದಟ್ಟಣೆ ಹೆಚ್ಚಿರುವ ಕಾರಣ ಸ್ಥಳೀಯ ಗ್ರಾಮಸ್ಥರು ಮತ್ತು ಸಾರ್ವಜನಿಕ ಪ್ರತಿನಿಧಿಗಳು ಕೂಡ ಕಾರಿಡಾರ್‌ನ ಅಗಲವನ್ನು 18 ಮೀಟರ್‌ನಿಂದ 30 ಮೀಟರ್‌ಗೆ ಹೆಚ್ಚಿಸುವಂತೆ ಒತ್ತಾಯಿಸಿದ್ದಾರೆ. ಸದರಿ ರಸ್ತೆಯು ರಾಷ್ಟ್ರೀಯ ಹೆದ್ದಾರಿ-44 ನ್ನು ಅತ್ತಿಬೆಲೆ, ಸರ್ಜಾಪುರ, ವೈಟ್‌ಫೀಲ್ಡ್ ಮೂಲಕ ಸಂಪರ್ಕಿಸುತ್ತದೆ. ಸುತ್ತಮುತ್ತಲಿನ ಪ್ರದೇಶಗಳಾದ ವೈಟ್‌ಫೀಲ್ಡ್, ಎಲೆಕ್ಟ್ರಾನಿಕ್‌ಸಿಟಿ ಮತ್ತು ಹೊಸೂರುಗಳಲ್ಲಿ ವಸತಿ, ವಾಣಿಜ್ಯ, ಕೈಗಾರಿಕೆ ಮತ್ತು ಶೈಕ್ಷಣಿಕ ಕೇಂದ್ರಗಳಾಗಿ ತ್ವರಿತವಾಗಿ ಅಭಿವೃದ್ಧಿ ಹೊಂದುತ್ತಿವೆ. ಎಲಿವೇಟೆಡ್ ಕಾರಿಡಾರ್ ನ ವಿಸ್ತರಣೆಯಲ್ಲಿರುವ PCU ಗಂಟೆಗೆ ಸುಮಾರು 8000 ಇರುತ್ತದೆ. ಕಾರಿಡಾರ್‌ನ್ನು ವಿಸ್ತರಿಸುವುದು ಮತ್ತು ಗ್ರೇಡ್ ರಸ್ತೆಯನ್ನು ಅಗಲಮಾಡುವುದು ಅಗತ್ಯವಾಗಿದೆ, ಇದು ಸಂಚಾರ ಸಮಸ್ಯೆಯನ್ನು ಸಮಗ್ರವಾಗಿ ಪರಿಹರಿಸುತ್ತದೆ. ಈ ಸಮಗ್ರ ಸುಧಾರಣೆಯು ಸಾರ್ವಜನಿಕ ಸಂಚಾರಕ್ಕೆ ಕಡಿಮೆ ದೂರದೊಂದಿಗೆ ಸಂಪರ್ಕವನ್ನು ಸುಧಾರಿಸುತ್ತದೆ.

ಮೇಲಿನ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಪ್ರಸ್ತಾವನೆಯನ್ನು ಸರ್ಕಾರದ ಮಟ್ಟದಲ್ಲಿ ಕೂಲಂಕುಶವಾಗಿ ಪರಿಶೀಲಿಸಿ, ಈ ಕೆಳಗಿನಂತೆ ಆದೇಶವನ್ನು ಹೊರಡಿಸಲಾಗಿದೆ.

**ಸರ್ಕಾರದ ಆದೇಶ ಸಂಖ್ಯೆ: ಲೋಇ ಇ-70 ಇಎಪಿ 2019, ಬೆಂಗಳೂರು, ದಿನಾಂಕ: 10-02-2022**

ಕೆಆರ್‌ಡಿಸಿಎಲ್ ವತಿಯಿಂದ ಕೈಗೊಳ್ಳಲಾಗುತ್ತಿರುವ ಬೆಂಗಳೂರು ಸುತ್ತಮುತ್ತಲಿನ ರಸ್ತೆಗಳ ಅಭಿವೃದ್ಧಿ ಯೋಜನೆಯ ಪ್ಯಾಕೇಜ್-4ಬಿ ಅಡಿಯಲ್ಲಿ ಬೆಂಗಳೂರು ನಗರ ಜಿಲ್ಲೆಯ ವರ್ತೂರು ಗ್ರಾಮದಲ್ಲಿ 1.30 ಕಿಮೀ ಉದ್ದದ ಎಲಿವೇಟೆಡ್ ಕಾರಿಡಾರ್ 1.92 ಕಿಮೀ ಉದ್ದಕ್ಕೆ ವಿಸ್ತರಿಸುವ ಕಾಮಗಾರಿಯನ್ನು ರೂ. 482.14 ಕೋಟಿಗಳ ಪರಿಷ್ಕೃತ ಅಂದಾಜು ಮೊತ್ತಕ್ಕೆ ಈ ಕೆಳಗಿನ ಷರತ್ತಿಗೊಳಪಟ್ಟು ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿದೆ.

ಅ. **Elevated Corridor ಉದ್ದವನ್ನು 1.30 ಕಿಮೀ ನಿಂದ 1.92 ಕಿಮೀ ಗೆ ವಿಸ್ತರಿಸುವ ಕುರಿತು:**

ಎರಡು ಪಥದ ಎಲಿವೇಟೆಡ್ ಕಾರಿಡಾರ್ ರ‍್ಯಾಂಪ್ ಅನ್ನು, ವರ್ತೂರು ಕೋಡಿ ದಕ್ಷಿಣ ಸೇತುವೆಗಳ ನಂತರ ವರ್ತೂರು ಟ್ಯಾಂಕ್ ಬಂಡ್ ರಸ್ತೆಯ ಕಡೆಗೆ ವಿಸ್ತರಿಸಲು (1.30 ಕಿಮೀ ನಿಂದ 1.92 ಕಿಮೀ ಉದ್ದ) ಹಾಗೂ ರಸ್ತೆ ಸುಧಾರಣೆಗೆ ಅನುಮೋದನೆ.

ಆ. **At grade ರಸ್ತೆ ಅಗಲವನ್ನು 18 ಮೀಟರ್ ನಿಂದ 30 ಮೀಟರ್‌ಗೆ ವಿಸ್ತರಿಸುವ ಕುರಿತು:**

ಭೂ ಮಾಲೀಕರಿಗೆ TDR ವಿತರಿಸುವ ಮೂಲಕ ಭೂಸ್ವಾಧೀನಪಡಿಸಿಕೊಳ್ಳಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ತಿಳಿಸುವುದು.

. . . . . 3

ಈ ಆದೇಶವನ್ನು ಆರ್ಥಿಕ ಇಲಾಖೆಯ ಹಿಂಬರಹ ಸಂಖ್ಯೆ: ಆಇ 80 ಆಕೋ-2/2019 (ಇ-ಆಫೀಸ್), ದಿನಾಂಕ: 16-10-2021 ರನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

10/2/2022
(ರಾಮಚಂದ್ರಪ್ಪ ಕೆ.ಹೆಚ್)
ಸರ್ಕಾರದ ಅಧೀನ ಕಾರ್ಯದರ್ಶಿ
ಬಾಹ್ಯ ಅನುದಾನಿತ ಯೋಜನೆಗಳು (ಇಎಪಿ)
ಲೋಕೋಪಯೋಗಿ ಇಲಾಖೆ

ಗೆ,
ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು ಮುಂದಿನ ರಾಜ್ಯ ಪತ್ರದಲ್ಲಿ ಪ್ರಕಟಿಸಲು.

ಪ್ರತಿಯನ್ನು :-

1. ಮಹಾಲೇಖಪಾಲರು (ಅಕೌಂಟ್ಸ್) ಕರ್ನಾಟಕ, ಬೆಂಗಳೂರು.
2. ಸನ್ಮಾನ್ಯ ಮುಖ್ಯ ಮಂತ್ರಿಯವರ ಅಪರ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ, ವಿಕಾಸಸೌಧ, ಬೆಂಗಳೂರು.
5. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ, ವಿಕಾಸಸೌಧ, ಬೆಂಗಳೂರು.
6. ಸರ್ಕಾರದ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ, ವಿಕಾಸಸೌಧ, ಬೆಂಗಳೂರು.
7. ಸರ್ಕಾರದ ಮುಖ್ಯ ಕಾರ್ಯದರ್ಶಿ ರವರ ವಿಶೇಶ ಕರ್ತವ್ಯಾಧಿಕಾರಿ, ಸಚಿವ ಸಂಪುಟ ಶಾಖೆ, ವಿಧಾನ ಸೌಧ, ಬೆಂಗಳೂರು ರವರಿಗೆ ದಿನಾಂಕ 27-01-2022 ರಂದು ಕಾರ್ಯ ಸೂಚಿ ಸಂಖ್ಯೆ 29 ರ ಪ್ರಕಾರ ಹೊರಡಿಸಿ ಕಳುಹಿಸಲಾಗಿದೆ.
8. ವಿಶೇಷಾಧಿಕಾರಿ ಹಾಗೂ ಪದನಿಮಿತ್ತ ಸರ್ಕಾರದ ಉಪಕಾರ್ಯದರ್ಶಿ, (ಆರ್ಥಿಕ ಕೋಶ) ಲೋಕೋಪಯೋಗಿ ಇಲಾಖೆ, ವಿಧಾನಸೌಧ, ಬೆಂಗಳೂರು.
9. ಆಂತರಿಕ ಆರ್ಥಿಕ ಸಲಹೆಗಾರರು, ಲೋಕೋಪಯೋಗಿ ಇಲಾಖೆ, ವಿಕಾಸಸೌಧ, ಬೆಂಗಳೂರು.
10. ಸರ್ಕಾರದ ಉಪಕಾರ್ಯದರ್ಶಿ, (ಸಂ ಮತ್ತು ಕ), ಲೋಕೋಪಯೋಗಿ ಇಲಾಖೆ, ವಿಕಾಸಸೌಧ, ಬೆಂಗಳೂರು.
11. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು.
12. ಜಂಟಿ ನಿರ್ದೇಶಕರು, ಸ್ಟೇಟ್ ಹುಜೂರು ಟ್ರೆಷರಿ, ಕೆ.ಆರ್ ಸರ್ಕಲ್, ಬೆಂಗಳೂರು.
13. ಪ್ರಧಾನ ಇಂಜಿನಿಯರ್, PRAMC, ಲೋಕೋಪಯೋಗಿ ಇಲಾಖೆ, ಕೆ.ಆರ್ ವೃತ್ತ, ಬೆಂಗಳೂರು ರವರಿಗೆ ವೆಬ್ ಸೈಟ್ ನಲ್ಲಿ ಪ್ರಕಟಿಸಲು.
14. ಕಡತ / ಹೆಚ್ಚುವರಿ ಪ್ರತಿಗಳು.